# ಹೂಗಳ್ಳರು

ಹೂಗಳ್ಳತನ ನಮ್ಮ ಸಮಾಜದಲ್ಲಿ ದೊಡ್ಡ ದಂದೆಯಲ್ಲ. ಅದು ಮಕ್ಕಳು ಹೆಣ್ಣುಮಕ್ಕಳು ಕಂಡವರ ತೋಟ ಅಥವಾ ಮನೆಯ ಆವರಣದ ಕೈದೋಟದಿಂದ ಕದ್ದು ಕಿತ್ತುಕೊಳ್ಳುವ ಪ್ರೀತಿಯ ಆಟ. ಅದೊಂದು ಬಗೆಯ ಸಾಹಸ ಕ್ರೀಡೆಯಾಗಿಯೂ ಶಾಲಾಮಕ್ಕಳಲ್ಲಿ ಚಿಗುರೊಡೆಯುವ ಕಲೆ. ಕಂಡವರ ತೋಟಗಳಲ್ಲಿ ಬೆಳೆದಿರುವ ಸೀಬೆ, ಮಾವು, ಪಪಾಯಿ ಕಾಯಿಗಳನ್ನು ಕದ್ದು ತಿನ್ನುವ ಸಾಹಸದಲ್ಲಿ ಅವರೊಂದು ಬಗೆಯ ಮಜಾ ಅನುಭವಿಸುತ್ತಾರೆ. ಅದು ಮುಂದೆ ಚಟವಾಗಿ ಕಳ್ಳತನದ ದಂದೆಯಾಗಿ ಬೆಳೆಯುವುದು ತೀರಾ ಅಪರೂಪ. ಗ್ರಾಮೀಣ ಪ್ರದೇಶದ ಮಕ್ಕಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಇಂಥ ಪ್ರಿಯ ಸಾಹಸಕ್ಕೆ ಕೈಹಾಕಿದವರೇ. ಇದು ಕೇವಲ ತಿನ್ನುವ ಚಪಲದ ಆಸೆಯಿಂದ ಮೂಡಿದ ಕ್ರಿಯೆಯೆ ಹೊರತು ಮತ್ತಾವ ದುರಾಸೆಯಿಂದ ಅಲ್ಲ. ಅವರು ಬೆಳೆದು ದೊಡ್ಡವರಾದಂತೆ ಅವುಗಳ ಮಧುರ ನೆನಪುಗಳಲ್ಲಷ್ಟೇ ಮುದಗೊಳ್ಳುತ್ತಾರೆ.

ಇನ್ನು ಹೆಣ್ಣುಮಕ್ಕಳು ತೋಟ ತುಡಿಗಳಲ್ಲಿ ನುಗ್ಗಿ ಕಳ್ಳತನ ಮಾಡುವ ಸಾಹಸಕ್ಕೆ ಕೈಹಾಕುವುದು ತೀರಾ ದೂರದ ಮಾತು. ಬೇಲಿಯ ಹೊರಗೆ ಅಥವಾ ಕೈ ತೋಟದ ಗೋಡೆಯ ಹೊರಗೆ ಇಣುಕುತ್ತಿರುವ ಒಂದು ಗುಲಾಬಿ, ಒಂದು ದಾಸವಾಳ, ಒಂದು ಚೆಂಡುಹೂ ಅಥವಾ ರೆಂಬೆಯ ಹಸಿರೆಲೆಗಳ ಮಧ್ಯೆ ಕೈಬೀಸಿ ಮೋಹದಿಂದ ಸೆಳೆಯುವ ಒಂದು ಸಂಪಿಗೆ– ಅವರಲ್ಲಿ ಕಿತ್ತುಕೊಂಡು ಮುಡಿಗೇರಿಸಿಕೊಳ್ಳುವ ಬಯಕೆಯನ್ನು ಮೂಡಿಸಬಹುದು. ಈ ಬಯಕೆಯನ್ನು ಅದುಮಿಟ್ಟುಕೊಳ್ಳಲಾರದೆ ಅವನ್ನು ಕಿತ್ತುಕೊಂಡು ಹೆದರಿ ಓಡಿ, ಏದುಸಿರುಬಿಡುತ್ತಾ, ಬಹು ದೊಡ್ಡ ಸಾಹಸ ಮಾಡಿದವರಂತೆ ಆ ಹೂವನ್ನು ಪ್ರೀತಿ ತುಂಬಿದ ಕಣ್ಣುಗಳಿಂದ ಅನುಭವಿಸಿ, ಮುಡಿಗೆ ಮುಡಿದುಕೊಂಡು ತಾವೇ ಒಂದು ಹೂವಾದಂತೆ ಆನಂದಿಸುತ್ತಾರೆ. ಈ ಮಕ್ಕಳು ಪಡುವ ಆನಂದವನ್ನು ಕಂಡ ಎಂಥ ಕಲ್ಲುಮನಸ್ಸಿನ ಆ ಹೂವಿನ ಮಾಲೀಕ(?) ತಾನೇ ಕೋಪಗೊಂಡಾನು? ಆ ಮಕ್ಕಳನ್ನು ಹೂಗಳ್ಳರೆಂದು ಕರೆದಾನು? ನಿಜಕ್ಕೂ ಅವನೊಳಗೆ ಒಂದು ಮಗುವಿನ ತೊಟ್ಟಿಲು ತೂಗುತ್ತಿದ್ದಲ್ಲಿ, ತಾನು ಬೆಳೆದ ಹೂವು ಸಾರ್ಥಕಗೊಂಡಿತೆಂದು ಆನಂದ ಪಟ್ಟಾನು!

ಆದರೆ ನಗರಗಳಲ್ಲಿ ನಿಜಕ್ಕೂ ಹೂಗಳ್ಳರಿದ್ದಾರೆ! ಅವರು ದೈವಭಕ್ತರು; ಪ್ರತಿ ದಿನ ದೇವರ ಪೂಜೆಯನ್ನು ಮಾಡದೆ ತಮ್ಮ ಕರ್ಮಾದಿಗಳನ್ನು ಆರಂಭಿಸರು! ಅವರು ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಂಡಿದ್ದು, ಮನೆಯ ಆವರಣದ ತುಂಬ ಸಿಮೆಂಟು ಕಾಂಕ್ರೀಟ್ಟು ನೆಲಹಾಸನ್ನು ಮಾಡಿಸಿ ಅತ್ಯಂತ ಸ್ವಚ್ಛವಾಗಿ ಇಟ್ಟುಕೊಂಡಿರುತ್ತಾರೆ. ಅಪ್ಪಿತಪ್ಪಿಯೂ ಹಸಿರು ಬೆಳೆಯದಂತೆ (ಪಾಚಿಯನ್ನೂ ಸಹ!) ನೋಡಿಕೊಳ್ಳುತ್ತಾರೆ. ಮನೆಯ ಸುತ್ತ ಮಣ್ಣಿನ ಜಾಗ ಬಿಟ್ಟು, ಅಲ್ಲಿ ಹೂಗಿಡಗಳನ್ನೂ ಮರಗಿಡಗಳನ್ನೂ ಬೆಳೆಯುವವರು ಇವರ ದೃಷ್ಟಿಯಲ್ಲಿ ದಡ್ಡರು ಅಥವಾ 'ವೇಸ್ಟ್ ಬಾಡಿಗಳು!' ಆದರೆ ಇವರು ದೈವಭಕ್ತರು! ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನು ಮಾಡಿದ ಮೇಲೆ ದೇವರಿಗೆ ಹೂವಿನ ಅರ್ಚನೆ ಮಾಡಬೇಕು. ಅದಕ್ಕೆ ಹೂ ಬೇಕು. ಆದರೆ ತಾವು ಬೆಳೆಯುವುದಿಲ್ಲವಲ್ಲ! ಹೂವನ್ನು ರಾತ್ರಿಯೇ ಅಥವಾ ಸೂರ್ಯೋದಯಕ್ಕೆ ಮುಂಚೆಯೇ ಬರುವ ಹೂವಾಡಿಗನ ಬಳಿ ದುಡ್ಡು ಕೊಟ್ಟು ಕೊಂಡುಕೊಳ್ಳಬೇಕಲ್ಲ! ಅದಕ್ಕೆ ಹಣ ಬೇರೆ ಖರ್ಚಾಗುತ್ತದಲ್ಲ! ಜೊತೆಗೆ ಮತ್ತೊಂದು ಬಲವಾದ ಕಾರಣವೂ ಇದೆ. ಅದು ಈ ಹೂವಾಡಿಗ ಮಾರುವ ಹೂ ಆಗಲೇ ಹಳೆಯದಾಗಿರುತ್ತದೆ. ಆ ಹೂವುಗಳು ತಮ್ಮ ತಾಜಾತನ ಕಳೆದುಕೊಂಡಿರುತ್ತವೆ ಮತ್ತು ಅವರಿವರಿಂದ ಮುಟ್ಟಿಸಿಕೊಂಡು ಮೈಲಿಗೆಯಾಗಿರುತ್ತವೆ. ಅಂಥ ಹೂವುಗಳಿಂದ ದೇವರನ್ನು ಅರ್ಚಿಸಿದರೆ– ಅವನಿಗೆ ಪ್ರಿಯವಾಗುವುದೆ? ಅವನಿಗೆ ಏನಿದ್ದರೂ ಅತ್ಯಂತ ತಾಜಾ ಆಗಿರುವ, ಆಗ ತಾನೆ ಅರಳುತ್ತಿರುವ, ಇಬ್ಬನಿಯ ಹನಿಯಿಂದ ಶುದ್ಧಗೊಂಡಿರುವ ಹೂವುಗಳೇ ಬೇಕು! ಅದರಿಂದ ಅವನ ಶ್ರೀಮಂತ ಮಹಲುಗಳ ಭಕ್ತರು ಅಕ್ಕ ಪಕ್ಕದ ಮನೆಗಳ ಆವರಣದಲ್ಲಿ ಅಥವಾ ರಸ್ತೆಗಳ ಮನೆಗಳ ಆವರಣದಲ್ಲಿ ಸಸ್ಯಪ್ರಿಯರು ತಮ್ಮ ಸಂತೋಷಕ್ಕಾಗಿ ಬೆಳೆಸಿಕೊಂಡಿರುವ ಗಿಡಗಳು ಬಿಟ್ಟಿರುವ ತಾಜಾ ಹೂವುಗಳನ್ನು ಕದ್ದು ತಂದು ಪೂಜಿಸಬೇಕು!

ನಗರಗಳಲ್ಲಿ ಕೆಲವು ಮಂದಿಯಾದರೂ ಪರಿಸರ ಪ್ರಜ್ಞೆಯಿರುವವರಿದ್ದಾರೆ. ಅವರು ತಮ್ಮ ಮನೆಯನ್ನು ಚಿಕ್ಕದಾಗಿ ಕಟ್ಟಿಸಿಕೊಂಡು– ಅವಶ್ಯಕತೆಗೆ ತಕ್ಕಂತೆ– ಮನೆಯ ಸುತ್ತ ಗಿಡ ಬಳ್ಳಿಗಳನ್ನು ಬೆಳೆಸಿ ಸುಂದರವಾದ ಹಸಿರು ವಾತಾವರಣವನ್ನು ಮೂಡಿಸಿರುತ್ತಾರೆ. ಗಿಡಬಳ್ಳಿಗಳಲ್ಲಿ ಬಿಡುವ ಹೂವುಗಳು ಅಲ್ಲೇ ಮೊಗ್ಗಾಗಿ, ಅರಳಿ ಬಿರಿದು ನಳ ನಳಿಸುವುದನ್ನು ನೋಡಿ, ಸುಗಂಧವನ್ನು ಸೂಸುವ, ಮಗ ಮಗಿಸುವ ಪ್ರಕೃತಿ ಸಹಜತೆಯನ್ನು ನೋಡಿ ಅನುಭವಿಸಿ ಆನಂದಿಸುವ ಆಸೆ ಅವರದು. ಆದರೆ ಅವರು ಬೆಳಿಗ್ಗೆ ಎದ್ದು ಅವರ ಮನೆಯ ಆವರಣದಲ್ಲಿ ಅರಳಲಿರುವ ಹೂವಿನ ಭಾಗ್ಯ ಅನೇಕ ಸಾರಿ ಅವರಿಗೆ ಸಿಗುವುದೇ ಇಲ್ಲ. ಆ ಹೂವುಗಳು ಆಧುನಿಕ ಭಕ್ತ ಹೂಗಳ್ಳರಿಂದ ಮಾಯವಾಗಿರುತ್ತವೆ. ಈ ಹೂಗಳ್ಳರು ಯಾವ ಮುಜಗರವೂ ಇಲ್ಲದೆ, ತಮ್ಮ ಕೈಯಲ್ಲಿ ಬುಟ್ಟಿಯನ್ನು ಹಿಡಿದುಕೊಂಡು ಹೂ ಬೆಳೆದವರ ಮನೆಯ ಗೋಡೆ ಒಳಗಿನಿಂದ ಇಣುಕಿ ನಗುತ್ತಿರುವ ಬಸವನಪಾದ, ಕಣಗಿಲೆ, ಗುಲಾಬಿ, ದಾಸವಾಳ, ಮಲ್ಲಿಗೆ ಮೊದಲಾದವುಗಳನ್ನು ಕದ್ದು ಒಯ್ದಿರುತ್ತಾರೆ!

ಇಂಥ ಕದ್ದ ಹೂವುಗಳಿಂದ ಪೂಜಿಸಿಕೊಂಡ ದೇವರು ತೃಪ್ತನಾಗಿ ಅವರಿಗೆ ಒಲಿಯುತ್ತಾನೆಯೇ? ಇಂಥ ಭ್ರಮೆಯಿಂದ ಈ ಆಸ್ತಿಕ ಮಹಾಶಯರು ಎಂದು ಹೊರಗೆ ಬರುತ್ತಾರೆ? ನಿಜವಾದ ಭಕ್ತಿ ಅವರಿಗೆ ಎಂದು ಅರ್ಥವಾದೀತು? ಚರಿತ್ರೆ–ಪುರಾಣಗಳ ಧ್ವನಿ ಇವರಿಗೆ ಅರ್ಥವಾಗುವುದಾದರೂ ಎಂದು?

■ **ಶಿಕಾಕು**

## ಮಾತೇ ಮುತ್ತು

★ ಪತ್ರಕರ್ತರು ವರ್ತಮಾನದ ಗುಲಾಮರಾಗಿ ಚರಿತ್ರೆಯನ್ನು ಮರೆಯುವುದು ಹಾಗೂ ರೋಚಕತೆಯ ಗುಲಾಮರಾಗಿ ವಾಸ್ತವವನ್ನು ಮರೆಯುವುದು ಅಪಾಯಕಾರಿ.

–ಎಚ್.ಎಸ್.ರಾಘವೇಂದ್ರರಾವ್

★ ಸಾಹಿತ್ಯ ಸೋತರೂ ಸಂಗೀತ ಸೋಲುವುದಿಲ್ಲ. ಸಾಹಿತ್ಯದ ಮೂಲಕ ಸಾಧಿಸಲಾಗದೇ ಇರುವುದನ್ನು ಸಂಗೀತದಿಂದ ಸಾಧಿಸಬಹುದು. ಕೆಲ ವಿಷಯಗಳಲ್ಲಿ ಸಾಹಿತ್ಯ ಸೋಲುತ್ತದೆ, ಆದರೆ ಸಂಗೀತ ಎಂದೂ ಸೋಲುವುದಿಲ್ಲ.

–ಸಾ.ಶಿ.ಮರುಳಯ್ಯ

★ ನಾವು ನಮ್ಮ ಬೂಟಾಟಿಕೆಗಳನ್ನು ಎಷ್ಟೇ ಮುಚ್ಚಿಟ್ಟುಕೊಂಡರೂ ಪಕೃತಿ ಅದನ್ನು ಬಿಚ್ಚಿಡುತ್ತದೆ.

–ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ

★ ಮನಸ್ಸನ್ನು ಹೆಚ್ಚಾಗಿ ದೋಷದ ಕಡೆಗೆ ತಿರುಗಿಸುವುದು ಒಳ್ಳೆಯದಲ್ಲ. ದೋಷವಿಲ್ಲದಿದ್ದರೂ – ಅದೇ ಮನಸ್ಸುಳ್ಳವರಿಗೆ ದೋಷವು ತೋರುತ್ತದೆ.

–ಶ್ಲೋಕವಾರ್ತಿಕ

★ ಕಾಮ ಯಾವಾಗಲೂ ಕಾಮವನ್ನು ಅನುಭವಿಸುವುದರಿಂದ ಶಮನವಾಗುವುದಿಲ್ಲ! ಹವಿಸ್ಸಿನಿಂದ ಬೆಂಕಿಯು ಬೆಳಗುವಂತೆ, ಕಾಮ ಇನ್ನೂ ಹೆಚ್ಚಾಗಿ ವೃದ್ಧಿ ಹೊಂದುತ್ತದೆ!

–ಭಾಗವತ

★ ಸಾಧಕಬಾಧಕಗಳನ್ನು ನಿಶ್ಚಯಿಸಿ ಉದ್ಯೋಗವನ್ನು ನಡೆಸಬೇಕು. ಗುಣವಿದ್ದರೆ ಸಂಗ್ರಹಿಸಬೇಕು, ದೋಷವಿದ್ದರೆ ಬಿಡಬೇಕು.

–ವಾಲ್ಮೀಕಿ ರಾಮಾಯಣ

★ ಎಲ್ಲ ಬಲ್ಲವಳೆಂಬ ಇಲ್ಲವದು ಭ್ರಮೆ ಎನಗೆ; ಬಲ್ಲವರ ಪಾದ ಹಿಡಿಯುವೆ, ಬಲ್ಲಿದರು ಕಲಿಸಿರಿ ಮತ್ತು ನುಡಿಸಿರಿ.

–ಜಯದೇವಿ ತಾಯಿ ಲಿಗಾಡೆ

★ ಮತವೆಂದರೆ ದೇವರನ್ನು ಕುರಿತ ನಂಬಿಕೆ ಮತ್ತು ಆ ನಂಬಿಕೆಗೆ ಅನುಸಾರವಾದ ನಡವಳಿಕೆ. ಈ ಮತವೆಂಬ ಮನೋಭಾವ ಇಲ್ಲದಿರುವ ಜನವೇ ಲೋಕದಲ್ಲಿಲ್ಲ.

–ಡಿ.ವಿ.ಜಿ.

★ ಎಲ್ಲಾ ಧರ್ಮಗಳೂ ಸತ್ಯ, ಹಾಗೆಯೇ ಎಲ್ಲ ಧರ್ಮಗಳಲ್ಲೂ ಕೆಲವು ದೋಷಗಳಿವೆ. ಹಿಂದು ಧರ್ಮವು ನನಗೆ ಎಷ್ಟು ಪ್ರಿಯವೋ ಉಳಿದ ಧರ್ಮಗಳೂ ಅಷ್ಟೇ ಪ್ರಿಯ. ಆದ್ದರಿಂದ ಮತಾಂತರ ಸಿದ್ಧಾಂತವನ್ನು ನಾನು ಒಪ್ಪುವುದಿಲ್ಲ.

–ಮಹಾತ್ಮ ಗಾಂಧೀಜಿ